ದಿಃ 18.06.2026

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.440-2024**

**ಪ್ರಾ.ಸಾಃ1**

**ಚಾಸಾಃ1**

| | | |
|---|---|---|
| ಸಾಕ್ಷಿಯ ಹೆಸರು | : | ಸುಧಾ |
| ಗಂಡನ ಹೆಸರು | : | ಲೇಟ್ ಶಶಿಧರ |
| ವಯಸ್ಸು | : | 25 ವರ್ಷ |
| ಕೆಲಸ | : | ಕೂಲಿ ಕೆಲಸ |
| ವಾಸ | : | ನೇರಲಕಟ್ಟೆ ಗ್ರಾಮ |

**ದಿಃ18.06.2026 ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಆರೋಪಿ ಗೊತ್ತು, ಅವರು ಅಪಘಾತ ಪಡಿಸಿದ ವ್ಯಕ್ತಿ. ಚಾಸಾ-2 ಮತ್ತು 9 ಗೊತ್ತು. ಅವರು ನಮ್ಮ ಗ್ರಾಮಸ್ಥರು, ಮೃತ ಶಶಿಧರ ನನ್ನ ಗಂಡ.

ದಿನಾಂಕ 15.12.2023 ರಂದು ಬಾರನಹಳ್ಳಿ ಬಂಡೆ ಹತ್ತಿರ ಕುರಿ ಕಾಯಲು (ಮೇಯಿಸಲು) ಹೋಗಿದ್ದು, ರೊಪ್ಪದಲ್ಲಿ ಕುರಿಗಳನ್ನು ಬಿಟ್ಟಿದ್ದು, ಆಗ ಎರಡು ಕುರಿಗಳು ಕಡಿಮೆ ಇದ್ದದ್ದು ಕಂಡುಬಂದಿದ್ದು, ಚಾಸಾ-2, 9 ಮತ್ತು ನನ್ನ ಗಂಡ ಕುರಿಗಳನ್ನು ಹುಡಕಲು ಹೋಗಿದ್ದು, ವಾಪಸ್ಸು ಬರುವಾಗ ಬಾರನಹಳ್ಳಿ ಬಂಡೆ ಹತ್ತಿರ ಟ್ರಾಕ್ಟರ್ ನಿಂದ ನಮ್ಮ ಯಜಮಾನರಿಗೆ ಅಪಘಾತವಾಗಿರುತ್ತದೆ ಎಂದು ಚಾಸಾ-2 ಮತ್ತು 9 ರವರು ತಿಳಿಸಿರುತ್ತಾರೆ. ಟ್ರಾಕ್ಟರ್ ತಾಳ್ಯದಿಂದ ಗಟ್ಟಿಹೊಸಹಳ್ಳಿ ಗ್ರಾಮದ ಕಡೆ ಜೋರಾಗಿ ಹೋಗುತ್ತಿದ್ದು, ಟ್ರಾಕ್ಟರ್ ಗುದ್ದಿ ಅಪಘಾತವಾಗಿರುತ್ತದೆ ಎಂದು ಚಾಸಾ-2 ಮತ್ತು 9 ರವರು ಪೋನ್ ಮಾಡಿ ತಿಳಿಸಿರುತ್ತಾರೆ. ನಾನು ಅಪಘಾತವಾದ ಸ್ಥಳಕ್ಕೆ ಹೋಗಿರುತ್ತೇನೆ. ರಾತ್ರಿ 12.30 ಸುಮಾರಿಗೆ ಅಪಘಾತ ಸ್ಥಳಕ್ಕೆ ಹೋಗಿದ್ದು, ಸದರಿ ಸಮಯದಲ್ಲಿ ಕೆಎ-16-5262 ಟ್ರಾಕ್ಟರ್ ಸ್ಥಳದಲ್ಲಿ ಇದ್ದಿದ್ದು ಕಂಡು ಬಂದಿರತ್ತುದೆ. ನಾನು ನನ್ನ ಮನೆಯವರನ್ನು ಕರೆದುಕೊಂಡು ಅಂಬುಲೆನ್ಸ್ ನಲ್ಲಿ ಚಿತ್ರದುರ್ಗ ಸರ್ಕಾರಿ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಯುತ್ತಿದ್ದು, ರಾತ್ರಿ 01.30 ವೇಳೆ ನನ್ನ ಗಂಡ ಮೃತರಾಗಿರುತ್ತಾರೆ ಎಂದು ನಮಗೆ ವೈದ್ಯರು ತಿಳಿಸಿರುತ್ತಾರೆ.

ಮರುದಿನ ಅಂದರೆ ದಿನಾಂಕ 16.12.2023 ರಂದು ಬೆಳಿಗ್ಗೆ ಚಿತ್ರಹಳ್ಳಿ ಗೇಟ್

ದಿ: 18.06.2026

ಪೊಲೀಸ್ ಠಾಣೆಗೆ ಬಂದು ದೂರು ನೀಡಿರುತ್ತೇನೆ. ಹೊಳಲ್ಕೆರೆ ಠಾಣೆಯವರು ಅಪಘಾತ ಪಡಿಸಿದ ವ್ಯಕ್ತಿಯನ್ನು ತೋರಿಸಿರುತ್ತಾರೆ. ಆರೋಪಿಯ ತಪ್ಪಿನಿಂದ ನಮ್ಮ ಯಜಮಾನರು ಮರಣ ಹೊಂದಿರುತ್ತಾರೆ.

ಸಾಕ್ಷಿಗೆ ದಿನಾಂಕ 16.12.2023 ರ ದೂರನ್ನು ತೋರಿಸಲಾಗಿ, ಸಾಕ್ಷಿ ದೂರನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ.ಜಿ.ಇ.ಆರ್ ವಕೀಲರಿಂದ**

ಚಾಸಾ-2 ಮತ್ತು 9 ನಮ್ಮ ಗ್ರಾಮಸ್ಥರು. ಅವರು ನಮ್ಮ ಸಂಬಂಧಿಕರಲ್ಲ. ನಾನು ಅಪಘಾತವನ್ನು ಖುದ್ದು ನೋಡಿರುವುದಿಲ್ಲ. ಚಾಸಾ-2 ಮತ್ತು 9 ರವರು ಹೇಳಿದ ಮೇರೆಗೆ ತಿಳಿದುಬಂದಿರುತ್ತದೆ ಎಂದರೆ ಸರಿ. ಚಾಸಾ-2 ಮತ್ತು 9 ರವರ ಹೇಳಿಕೆಯ ಮೇರೆಗೆ ಅಪಘಾತವಾಗಿರುತ್ತದೆ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಅಪಘಾತದ ಸ್ಥಳದಲ್ಲಿ ಟ್ರಾಕ್ಟರ್ ಇತ್ತು ಎಂದು ನುಡಿದಿರುತ್ತಾರೆ. ಪೊಲೀಸ್ ಠಾಣೆಯಲ್ಲಿ ಪೊಲೀಸರು ಆರೋಪಿಯನ್ನು ತೋರಿಸಿರುತ್ತಾರೆ. ನಾನು ಘಟನಾ ಸ್ಥಳದಲ್ಲಿ ಆರೋಪಿಯನ್ನು ನೋಡಿರುವುದಿಲ್ಲ.

ಆರೋಪಿ ಟ್ರಾಕ್ಟರಿನ ಮಾಲೀಕನಾಗಿದ್ದು, ಆತನ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾರ ತಿಪ್ಪಿನಿಂದ ಅಪಘಾತವಾಗಿದ ಎಂದು ತಿಳಿದಿಲ್ಲ. ಆರೋಪಿಯ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ವಿಮಾ ಪರಿಹಾರ ಪಡೆದುಕೊಳ್ಳುವ ಸಲುವಾಗಿ ಆರೋಪಿಯ ವಾಹನದಿಂದ ಅಪಘಾತವಾಗಿದೆ ಎಂದು ಪೊಲೀಸರಿಗೆ ಸುಳ್ಳು ಮಾಹಿತಿ ನೀಡಿ, ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.